ಕರ್ನಾಟಕ ಸರ್ಕಾರ

ನಿರ್ದೇಶಕರ ಕಚೇರಿ, ಪದವಿ ಪೂರ್ವ ಶಿಕ್ಷಣ ಇಲಾಖೆ, ೧೮ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು.

Email Id: commissioner.pue @gmail.com Phone No: 080-23562033

ಸಂಖ್ಯೆ:ಡಿಪಿಯುಇ/ಇಎಸ್‌ಟಿ೧೦/ಪಿಆರ್‌ಓಎಂ/೪/೨೦೨೨-೨೩. ದಿನಾಂಕ: 23 -೦೯-೨೦೨೨.

# ಅಧಿಕೃತ ಜ್ಞಾಪನ

ವಿಷಯ: ಪದವಿ ಪೂರ್ವ ಶಿಕ್ಷಣ ಇಲಾಖೆಯ ಅರ್ಹ ಪ್ರಥಮ ದರ್ಜೆ ಸಹಾಯಕರಿಗೆ ಅಧೀಕ್ಷಕರ ಹುದ್ದೆಗೆ ನೀಡಿರುವ ಬಡ್ತಿಯನ್ನು ಬಿಟ್ಟುಕೊಡಲು ಕೋರಿರುವುದನ್ನು ಅಂಗೀಕರಿಸುವ ಬಗ್ಗೆ.

ಉಲ್ಲೇಖ: ೧. ಪದವಿ ಪೂರ್ವ ಶಿಕ್ಷಣ ಇಲಾಖೆ ವೃಂದ ಮತ್ತು ನೇಮಕಾತಿ ನಿಯಮಗಳು ೨೦೧೪.

೨.ಸರ್ಕಾರದ ಆದೇಶ ಸಂಖ್ಯೆ: ಇಪಿ ೫೨ ಟಿಪಿಯು ೨೦೨೧, ದಿ:೦೬-೦೭-೨೦೨೨.

೩.ಈ ಕಚೇರಿ ಜ್ಞಾಪನ ಸಂಖ್ಯೆ: ಡಿಪಿಯುಇ ಇಎಸ್‌ಟಿ-೧೦ ಎಸ್‌ಇಎನ್ ೦೨/ ೨೦೨೦ ದಿನಾಂಕ:೨೦-೦೫-೨೦೨೨.

೪.ಇಲಾಖಾ ಮುಂಬಡ್ತಿ ಸಭೆ ನಡಾವಳಿ ದಿನಾಂಕ: ೧೯-೦೮-೨೦೨೨

೫.ಈ ಕಚೇರಿ ಸಮ ಸಂಖ್ಯೆ ಅಧಿಕೃತ ಜ್ಞಾಪನ ದಿನಾಂಕ: ೨೨-೦೮-೨೦೨೨

೬.ಸ್ವಯಿಚ್ಛೆಯಿಂದ ಬಡ್ತಿಯನ್ನು ಬಿಟ್ಟುಕೊಡಲು ಸಲ್ಲಿಸಿರುವ ಐದು ನೌಕರರ ಮನವಿ ಪತ್ರಗಳು.

೭.ಸರ್ಕಾರದ ಅಧಿಸೂಚನೆ ಸಂಖ್ಯೆ: ಡಿಪಿಎಆರ್ ೫೭ ಎಸ್‌ಆರ್‌ಆರ್ ೨೦೦೧ ದಿನಾಂಕ; ೨೨-೦೫-೨೦೦೨

-*-

ಪದವಿ ಪೂರ್ವ ಶಿಕ್ಷಣ ಇಲಾಖೆಯಲ್ಲಿ ಖಾಲಿ ಇರುವ ಮತ್ತು ಖಾಲಿಯಾಗಲಿದ್ದ ಅಧೀಕ್ಷಕರ ಹುದ್ದೆಗಳಿಗೆ ಪ್ರಥಮ ದರ್ಜೆ ಸಹಾಯಕರ ಹುದ್ದೆಯಿಂದ ಅಧೀಕ್ಷಕರ ಹುದ್ದೆಗೆ ವೃಂದ ಮತ್ತು ನೇಮಕಾತಿ ನಿಯಮಾವಳಿಗಳಂತೆ ಸ್ಥಾನಪನ್ನ ಬಡ್ತಿಯನ್ನು ನೀಡುವ ಸಲುವಾಗಿ ದಿನಾಂಕ:೧೯-೦೮-೨೦೨೨ ರಂದು ಇಲಾಖಾ ಮುಂಬಡ್ತಿ ಸಭೆಯನ್ನು ನಡೆಸಲಾಯಿತು.

ಉಲ್ಲೇಖ-(೫) ರಂತೆ ಪದವಿ ಪೂರ್ವ ಶಿಕ್ಷಣ ಇಲಾಖೆಯ ಗ್ರೂಪ್ 'ಸಿ' ವೃಂದದ ವೇತನ ಶ್ರೇಣಿ ರೂ. ೨೭೬೫೦-೫೨೬೫೦ ರಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಪ್ರಥಮ ದರ್ಜೆ ಸಹಾಯಕರುಗಳಿಗೆ ಗ್ರೂಪ್ 'ಸಿ' ವೃಂದದ ವೇತನ ಶ್ರೇಣಿ ರೂ. ೩೭೯೦೦-೭೦೮೫೦ ರ ಅಧೀಕ್ಷಕರ ಹುದ್ದೆಗಳಿಗೆ ಸ್ಥಾನಪನ್ನ ಬಡ್ತಿಯನ್ನು ನೀಡಿ ಆದೇಶಿಸಲಾಗಿತ್ತು.

ದಿನಾಂಕ: ೨೨-೦೮-೨೦೨೨ರ ಅಧಿಕೃತ ಜ್ಞಾಪನದಲ್ಲಿ ನೀಡಿರುವ ೧೬ ಮಂದಿ ನೌಕರರಲ್ಲಿ ಐದು ನೌಕರರು ಉಲ್ಲೇಖ-(೬) ರಲ್ಲಿ ಬಡ್ತಿಯನ್ನು ಕರ್ನಾಟಕ ಸಿವಿಲ್ ಸೇವಾ (ಸಾಮಾನ್ಯ ನೌಕರಿ ಭರ್ತಿ) ನಿಯಮಗಳು-೧೯೭೭ರ ನಿಯಮ ೪ಎ ರಂತೆ ಬಿಟ್ಟುಕೊಡಲು ಮನವಿಗಳನ್ನು ಸಲ್ಲಿಸಿರುತ್ತಾರೆ. ಇವರ ಮನವಿಗಳನ್ನು ಪರಿಶೀಲಿಸಿ, ಉಲ್ಲೇಖ-(೭)ರ ಸರ್ಕಾರದ ಅಧಿಸೂಚನೆ ಸಂಖ್ಯೆ: ಡಿಪಿಎಆರ್ ೫೭ ಎಸ್ ಆರ್‌ಆರ್ ೨೦೦೧ ದಿನಾಂಕ: ೨೨-೦೫-೨೦೦೨ ಮತ್ತು ಕರ್ನಾಟಕ ಸಿವಿಲ್ ಸೇವಾ (ಸಾಮಾನ್ಯ ನೌಕರಿ ಭರ್ತಿ) ನಿಯಮಗಳು-೧೯೭೭ರ ನಿಯಮ ೪ಎ ರನ್ವಯ ಅಂಗೀಕರಿಸಲು ತೀರ್ಮಾನಿಸಿ, ಈ ಕೆಳಕಂಡಂತೆ ಆದೇಶ ಮಾಡಲಾಗಿದೆ.

ಈ ಕೆಳಕಂಡ ಪ್ರಥಮ ದರ್ಜೆ ಸಹಾಯಕರು ಅಧೀಕ್ಷಕರ ಹುದ್ದೆಗಳಿಗೆ ಸ್ಥಾನಪನ್ನ ಬಡ್ತಿಯನ್ನು ಬಿಟ್ಟುಕೊಡಲು ಕೋರಿರುವುದನ್ನು ಪರಿಗಣಿಸಿ, ಸರ್ಕಾರದ ಅಧಿಸೂಚನೆ ಸಂಖ್ಯೆ: ಡಿಪಿಎಆರ್ ೫೭ ಎಸ್ ಆರ್‌ಆರ್ ೨೦೦೧ ದಿನಾಂಕ: ೨೨-೦೫-೨೦೦೨ ಮತ್ತು ಕರ್ನಾಟಕ ಸಿವಿಲ್ ಸೇವಾ (ಸಾಮಾನ್ಯ ನೌಕರಿ ಭರ್ತಿ) ನಿಯಮಗಳು-೧೯೭೭ರ ನಿಯಮ ೪ಎ ರನ್ವಯ ಅಂಗೀಕರಿಸಿ ಅನುಮತಿಸಿದೆ.

| ಕ್ರಮ ಸಂಖ್ಯೆ | ಜೇಷ್ಠತಾ ಸಂಖ್ಯೆ | ಬಡ್ತಿಯನ್ನು ಬಿಟ್ಟುಕೊಟ್ಟಿರುವ ನೌಕರರ ಹೆಸರು/ಕಚೇರಿ ಹೆಸರು ಶ್ರೀ/ಶ್ರೀಮತಿ |
|---|---|---|
| ೧ | ೧೭೪ | ಸುಧಾರಾಣಿ ಎಸ್, ಬಾಲಕಿಯರ ಸರ್ಕಾರಿ ಪದವಿ ಪೂರ್ವ ಕಾಲೇಜು, ಕುಣಿಗಲ್, ತುಮಕೂರುಜಿಲ್ಲೆ. |
| ೨ | ೧೮೦ | ಶೋಭಾನಂದಕುಮಾರ, ಸರ್ಕಾರಿ ಪದವಿ ಪೂರ್ವ ಕಾಲೇಜು, ನಡಾ, ಬೆಳ್ತಂಗಡಿ ತಾಲ್ಲೂಕು, ದಕ್ಷಿಣ ಕನ್ನಡ ಜಿಲ್ಲೆ. |
| ೩ | ೧೮೬ | ಸಂತೋಷ ಜೆ, ಸರ್ಕಾರಿ ಪದವಿ ಪೂರ್ವ ಕಾಲೇಜು, ತುಮಕೂರು. |
| ೪ | ೧೮೮ | ವಿನಯಕುಮಾರಿ ಕೆ ಎನ್, ಸರ್ಕಾರಿ ಪದವಿ ಪೂರ್ವ ಕಾಲೇಜು, ಸವಳಂಗ, ಹೊನ್ನಾಳಿ ತಾಲ್ಲೂಕು, ದಾವಣಗೆರೆ ಜಿಲ್ಲೆ. |
| ೫ | ೧೮೯ | ಕಮಲಮ್ಮ, ಸರ್ಕಾರಿ ಪದವಿ ಪೂರ್ವ ಕಾಲೇಜು, ವಾಣಿವಿಲಾಸ, ಹಾಸನ |

ಬಡ್ತಿಯನ್ನು ಬಿಟ್ಟುಕೊಟ್ಟಿರುವ ಪ್ರಥಮ ದರ್ಜೆ ಸಹಾಯಕರು ಒಂದು ವರ್ಷ ಅಥವಾ ಮುಂದಿನ ಬಡ್ತಿ ಪ್ರಕ್ರಿಯೆ ಇವುಗಳಲ್ಲಿ ಯಾವುದು ನಂತರವೋ ಅಲ್ಲಿಯವರೆವಿಗೆ ಬಡ್ತಿಗೆ ಅರ್ಹರಿರುವುದಿಲ್ಲ. **ಸಂಬಂಧಿಸಿದ ಕಚೇರಿ ಮುಖ್ಯಸ್ಥರು ಈ ಕುರಿತು ತಪ್ಪದೇ ಸೇವಾ ಪುಸ್ತಕದಲ್ಲಿ ನಮೂದಿಸಲು ತಿಳಿಸಿದೆ.**

ನಿರ್ದೇಶಕರು,
ಪದವಿ ಪೂರ್ವ ಶಿಕ್ಷಣ ಇಲಾಖೆ.

**ಇವರಿಗೆ:**

೧. ನಿರ್ದೇಶಕರು/ಜಂಟಿ ನಿರ್ದೇಶಕರು(ಆಡಳಿತ), ಉಪನಿರ್ದೇಶಕರು(ಆಡಳಿತ) ಇವರ ಆಪ್ತಶಾಖೆ.

೨. ಸಂಬಂಧಿಸಿದ ಜಿಲ್ಲಾ ಉಪನಿರ್ದೇಶಕರಿಗೆ.

೩. ಸಂಬಂಧಿಸಿದ ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ಪ್ರಾಂಶುಪಾಲರಿಗೆ.

೪. ಸಂಬಂಧಿಸಿದ ನೌಕರರಿಗೆ-ಉಪನಿರ್ದೇಶಕರು/ಪ್ರಾಂಶುಪಾಲರ ಮೂಲಕ

೫. ಸಹಾಯಕ ನಿರ್ದೇಶಕರು, ಇ-ಆಡಳಿತ, ಪದವಿ ಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು ಇವರಿಗೆ ಇಲಾಖಾ ಅಂತರ್ಜಾಲದಲ್ಲಿ ಅಳವಡಿಸಲು ಸೂಚಿಸಿದೆ.